ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿಫೆಕ್ಷನ್ ಆಗಿದ್ದರೆ ಸಂಖ್ಯಾಬಲ ಕಡಿಮೆಯಾಗಿ ಡಿರೆಕಗ್ನೈಸ್ ಆಗುತ್ತದೆ. ಬಹುಮತ ಯಾರಿಗೆ ಇದೆಯೋ ಅವರಿಗೆ ಕೊಡಬೇಕು.

7. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ಬಾಳಗಡಿಯಲ್ಲಿ ತೆರೆಯುವುದು.

† ಶ್ರೀ ಹೆಚ್. ಜಿ. ಗೋವಿಂದಗೌಡ.—ಮಾನ್ಯ ಅಧ್ಯಕ್ಷರೇ, ಕೊಪ್ಪ ತಾಲ್ಲೂಕಿನಲ್ಲಿ ಕೊಪ್ಪ ಟೌನಿಂದ ಬಾಳಗಡಿಯು ಸುಮಾರು ೩ ಕಿ. ಮೀ. ದೂರದಲ್ಲಿರುತ್ತದೆ. ಇದು ಬಿಂತರವಳ್ಳಿ ಮಂಡಲ ಪಂಚಾಯಿತಿಗೆ ಸೇರಿದ್ದು ಇಲ್ಲಿ ಎಲ್ಲಾ ಸರ್ಕಾರಿ ಕಛೇರಿಗಳೂ ಕೇಂದ್ರೀಕೃತವಾಗಿದ್ದು ಸರ್ಕಾರಕ್ಕೆ ಹಣ ಪಾವತಿ ಮಾಡಬೇಕಾದಲ್ಲಿ ಬಾಳಗಡಿಯ ಖಜಾನೆ ಇಲಾಖೆಯಿಂದ ಕೌಂಟರ್ ಸಹಿ ಮಾಡಿಸಿಕೊಂಡು ಹಣ ಕಟ್ಟಲು ಕೊಪ್ಪ ಟೌನ್‌ನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಹೋಗಿ ಬರಲು ೧೦ ರೂ. ಆಟೋ ಚಾರ್ಜ್ ತೆರಬೇಕಾಗುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ ಬಾಳಗಡಿಯಲ್ಲಿರುವ ತಾಲ್ಲೂಕ್ ಆಫೀಸಿನಲ್ಲಿಯೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎಕ್ಸ್‌ಟೆನ್‌ಷನ್ ಕೌಂಟರನ್ನು ತೆರೆಯಲು ಸರ್ಕಾರ ಏಕೆ ಶೀಘ್ರ ಕ್ರಮ ಕೈಗೊಳ್ಳಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರ ತಂದಾ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಂತ್ತೇನೆ.

8. ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರ ಮುಷ್ಕರದ ಬಗ್ಗೆ

ಶ್ರೀ ಆರ್. ವೆಂಕಟರಾವಯ್ಯ,—ಮಾನ್ಯ ಅಧ್ಯಕ್ಷರೇ, ಕರ್ನಾಟಕಾದ್ಯಂತ ನಗರ ಪ್ರದೇಶಗಳ ಜಲಮಂಡಳಿಯ ಕಾರ್ಮಿಕರು ಮುಷ್ಕರ ಹೂಡಲು ನೋಟೀಸ್ ಕೊಟ್ಟಿದ್ದಾರೆ. ಎಲ್ಲಾ ಪಟ್ಟಣಗಳ ಕುಡಿಯುವ ನೀರು ಸರಬರಾಜು ನಿಲ್ಲುವ ತೊಂದರೆಯಿದೆ.

ಹೋದ ಸಲ ಮುಷ್ಕರ ಮಾಡಿದಾಗ ಮುಷ್ಕರದ ದಿನವನ್ನು ರಜಾ ಎಂದು ಘೋಷಿಸಿಲ್ಲ, ಬಡ್ತಿ ಕೊಟ್ಟಿಲ್ಲ, ಎಲ್ಲರನ್ನೂ ಖಾಯಂ ಮಾಡಿಲ್ಲ. ಸಾವಿರಾರು ಕಾರ್ಮಿಕರನ್ನು ದಿನಕೂಲಿ ಕಾರ್ಮಿಕರೆಂದೇ ತೀರ್ಮಾನಿಸಿ ವರ್ಕ್‌ಚಾರ್ಜ್ ಕೆಲಸಗಾರರೆಂದು ಆಜ್ಞೆ ಮಾಡಿಲ್ಲ. ೧-೧-೧೯೬೬ರಿಂದ ಅವರನ್ನು ಖಾಯಂ ಮಾಡಲು ಒಪ್ಪಿದ್ದರೂ ಖಾಯಂ ಮಾಡಿಲ್ಲ. ಸಮಾನ ಕೆಲಸಕ್ಕೆ ಸಮಾನವೇತನ ತತ್ವಕ್ಕೆ ಕೊಡಲೊಪ್ಪಿದ್ದರೂ, ಸರ್ವೋಚ್ಚ ನ್ಯಾಯಾಲಯ ತಾ : ೧೭-೧-೧೯೬೬ರ ಆರ್ಡರ್ ಅನುಸರಿಸಿ ಅವರಿಗೆ ನೀಡಬೇಕಾದ ಅನುಕೂಲ ಕೊಟ್ಟಿಲ್ಲ. ೩-೪-೧೯೬೬ರ ಆರ್ಡರನ್ನು ಜಾರಿಗೊಳಿಸಿಲ್ಲ. ಸರ್ಕಾರ ತನ್ನ ಮಾತಿನ ಪ್ರಕಾರ ಇದನ್ನು ನಡೆಸಿಕೊಟ್ಟು ಕಾರ್ಮಿಕರ ಬೇಡಿಕೆಗಳನ್ನು ಒಪ್ಪಬೇಕೆಂದು ಸರ್ಕಾರವನ್ನು ಒತ್ತಾಯಿಸಲು ಈ ಪ್ರಸ್ತಾವನೆಯನ್ನು ಸದನದ ಮುಂದೆ ತರಲು ಇಚ್ಛಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತಂದು ಕೂಡಲೇ ನೆರವು ತೆಗೆದುಕೊಳ್ಳುವಂತೆ ಹೇಳುತ್ತೇನೆ.

9. ಬೆಂಗಳೂರಿನ ಎಪಿ ಎಂಸಿ ಮಾರುಕಟ್ಟೆಯಲ್ಲಿ ಹಣ್ಣು ವ್ಯಾಪಾರಸ್ಥರು ಹಾಗೂ ಕಮಿಷನ್ ಏಜೆಂಟರು ಮುಷ್ಕರದ ಬೆದರಿಕೆ ಹಾಕಿರುವುದು.

† ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ಎಪಿ ಎಂಸಿ ಮಾರುಕಟ್ಟೆ ಕಲಾಸಿಪಾಳ್ಯದಲ್ಲಿರುವ ಹಣ್ಣು ವ್ಯಾಪಾರ ಮಾಡುವವರೂ, ಕಮಿಷನ್ ಏಜೆಂಟರೂ ಒಂದಾಗಿ ಸೇರಿ ಮುಷ್ಕರ ಹೂಡುವ ಬೆದರಿಕೆ ಹಾಕಿದ್ದಾರೆ. ಹಣ್ಣು ಮತ್ತು ತರಕಾರಿ ಬೆಳೆಗಾರರಿಂದ ಕಮಿಷನನ್ನು ಪಡೆಯಕೂಡದೆಂದು ಆಜ್ಞೆ ಇದ್ದರೂ ಸಹ ಇದಕ್ಕೆ ವಿರೋಧವಾಗಿ ಈ ಕಮಿಷನ್

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.